ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ವಿಶ್ವಬ್ಯಾಂಕ್ ಯೋಜನೆಯನ್ವಯ ಮುಖ್ಯ ಅಭಿಯಂತರರ ಕಛೇರಿಗಳಲ್ಲಿ ಸಾರಿಗೆ ಕೋಶಗಳನ್ನು (Traffic-Cell) ಸ್ಥಾಪಿಸುವ ಬಗ್ಗೆ.

ಓದಲಾಗಿದೆ:-1)ಸರ್ಕಾರದ ಆದೇಶ ಸಂಖ್ಯೆ.ಲೋಇ/72/ಇಎಪಿ-01 ದಿನಾಂಕ 8-8-2001

2)ಸರ್ಕಾರದ ಆದೇಶ ಸಂಖ್ಯೆ.ಲೋಇ/88/ಇಎಪಿ-2002 ಬೆಂಗಳೂರು ದಿನಾಂಕ 24-10-2002

3)ಸರ್ಕಾರದ ಆದೇಶ ಸಂಖ್ಯೆ.ಲೋಇ/55/ಇಎಪಿ-06 ದಿನಾಂಕ 24-11-2006

4)ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ) ರವರ ಪತ್ರ ಸಂಖ್ಯೆ.ಸಿಬಿಎನ್/ಸಿ.9/ಸಾರಿಗೆ ಕೋಶ/06-07/ 8248 ದಿನಾಂಕ 4-12-2006

5)ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ರವರ ಪತ್ರ ಸಂಖ್ಯೆ.ಸಿಬಿಎಸ್/ಸಾರಿಗೆ ಕೋಶ/06-07/ 8248 ದಿನಾಂಕ 20-12-2006.

**ಪ್ರಸ್ತಾವನೆ:-**

ವಿಶ್ವಬ್ಯಾಂಕ್ ಮತ್ತು ಕರ್ನಾಟಕ ಸರ್ಕಾರವು ಮಾಡಿಕೊಂಡ ಒಪ್ಪಂದದ ಮೇರೆಗೆ ಓದಲಾದ (1) ರಲ್ಲಿನ ಸರ್ಕಾರದ ಆದೇಶದನ್ವಯ ಸಾಂಸ್ಥಿಕ ಅಭಿವೃದ್ಧಿ ಕೋಶವನ್ನು (ಐ.ಡಿ.ಎಸ್.ಸೆಲ್) ಪ್ರಧಾನ ಕಾರ್ಯದರ್ಶಿಯವರ ಮೇಲ್ವಿಚಾರಣೆಯಲ್ಲಿ ಸ್ಥಾಪಿಸಿ ಲೋಕೋಪಯೋಗಿ ಇಲಾಖೆಯ ಸಾಂಸ್ಥಿಕ ಅಭಿವೃದ್ಧಿ ತಂತ್ರಕಾರ್ಯ ಯೋಜನೆಯಡಿ ರಸ್ತೆಗಳ ಸುರಕ್ಷಣಾ ಕಾರ್ಯಗಳನ್ನು ಸಮನ್ವಯಗೊಳಿಸಲು ಮತ್ತು ಉಸ್ತುವಾರಿ ಮಾಡಲು ಸಾರಿಗೆ ಕೋಶಗಳನ್ನು ಓದಲಾದ (2) ರಲ್ಲಿನ ಸರ್ಕಾರದ ಆದೇಶದಂತೆ ದಿನಾಂಕ 31-12-2006 ರವರೆಗೆ ಚಾಲಿಯಲ್ಲಿರುವಂತೆ ಸೃಷ್ಟಿಸಲಾಗಿದ್ದು, ಇದರಡಿಯಲ್ಲಿ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿತ್ತು.

| | | |
|---|---|---|
| 1) | ಸಹಾಯಕ ಕಾರ್ಯಪಾಲಕ ಇಂಜನಿಯರ್ | 2 ಹುದ್ದೆಗಳು |
| 2) | ಸಹಾಯಕ ಇಂಜಿನಿಯರ್ | 4 ಹುದ್ದೆಗಳು |
| 3) | ಡಾಟಾ ಎಂಟ್ರಿ ಆಪರೇಟರ್ ಶೀಘ್ರಲಿಪಿಗಾರರು - | 2 ಹುದ್ದೆಗಳು |

ಸದರಿ ಕೋಶದ ಅವಧಿಯು 31-12-2006 ಕ್ಕೆ ಮುಗಿಯಲಿರುವುದರಿಂದ ಓದಲಾದ (4) ಹಾಗೂ (5) ರಲ್ಲಿನ ಮುಖ್ಯ ಇಂಜಿನಿಯರುಗಳ ಪತ್ರಗಳಲ್ಲಿ ಸದರಿ ಕೋಶದ ಅವಶ್ಯಕತೆಯಿರುವುದರಿಂದ ಮತ್ತೊಂದು ಅವಧಿಗೆ ಅಂದರೆ ದಿನಾಂಕ 31-12-2008 ರ ವರೆಗೆ ಮುಂದುವರಿಸಲು ಕೋರಿರುವರು.

ಓದಲಾದ (6) ರಲ್ಲಿನ ಸರ್ಕಾರದ ಆದೇಶದಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-1 ನ್ನು 31 ಡಿಸೆಂಬರ್ 2006 ರಿಂದ 31 ಅಕ್ಟೋಬರ್ 2006 ರವರೆಗೆ ಮುಂದುವರಿಸಲಾಗಿರುವುದರಿಂದ ಸದರಿ ಸಾರಿಗೆ ಕೋಶವನ್ನು 31-10-2007 ರವರೆಗೆ ಮುಂದುವರಿಸಬಹುದಾಗಿದೆ.

ಆದ್ದರಿಂದ ಈ ಕೆಳಕಂಡಂತೆ ಆದೇಶ

<u>ಸರ್ಕಾರದ ಆದೇಶ ಸಂಖ್ಯೆ.ಲೋಇ/116/ಇಎಪಿ/2006 ಬೆಂಗಳೂರು ದಿನಾಂಕ 02-01-2007</u>

ಮೇಲಿನ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಸದರಿ ಸಾರಿಗೆ ಕೋಶವನ್ನು 31-10-2007 ರವರೆಗೆ ಮುಂದುವರಿಸಲು ಆದೇಶಿಸಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

2/1/07
(ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ (ಇಎಪಿ)

2/1/07

ಗೆ,

ಕಂಪೈಲರ್, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಮುಂದಿನ ರಾಜ್ಯ ಪತ್ರದಲ್ಲಿ ಪ್ರಸ್ತಾಪಿಸಲು

ಪ್ರತಿಯನ್ನು:-

1. ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ ಬೆಂಗಳೂರು
2. ಮಹಾಲೇಖಪಾಲರು (ಆಡಿಟ್) ಕರ್ನಾಟಕ ಬೆಂಗಳೂರು
3. ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ
4. ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
5. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ

6.ಮುಖ್ಯ ಯೋಜನಾಧಿಕಾರಿಗಳು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್.ಸರ್ಕಲ್, ಬೆಂಗಳೂರು.

7.ಯೋಜನಾ ನಿರ್ದೇಶಕರು, ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್.ಸರ್ಕಲ್, ಬೆಂಗಳೂರು.

8.ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ) ಧಾರವಾಡ

9.ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು

10.ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಆರ್ಥಿ ಕೋಶ)

11.ಹೆಚ್ಚುವರಿ ಪ್ರತಿಗಳು